| | |
|---|---|
| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**34/2022** | |
| | ಚಾಸಾ-**1** |
| | ಪ್ರಾಸಾ-**1** |
| ಸಾಕ್ಷಿದಾರರ ಹೆಸರು | ಸುರೇಖಾ ಕುಲ್ಲೊಳ್ಳಿ |
| ಗಂಡನ ಹೆಸರು | ಆನಂದ |
| ವಯಸ್ಸು | **35** ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಹುನ್ನೂರು, ತಾಃ ಜಮಖಂಡಿ. |

ದಿನಾಂಕ **12-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-

1. ಚಾಸಾ-3 ನನ್ನ ತಾಯಿ ಇರುತ್ತಾರೆ. ನನಗೆ ಚಾಸಾ-4 ರಿಂದ 8 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಎಲ್ಲಾ ಆರೋಪಿತರು ನನ್ನ ಸಂಬಂಧಿಕರು ಇರುತ್ತಾರೆ. ಇಂದು ನ್ಯಾಯಾಲಯದ ಮುಂದೆ ಗೈರು ಹಾಜರಾಗಿರುವ 3 ಮತ್ತು 5ನೇ ಆರೋಪಿತರು ಸಹ ನನ್ನ ಸಂಬಂಧಿಕರು ಇರುತ್ತಾರೆ. ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಜಮಖಂಡಿಯಲ್ಲಿ ವಾಸ ಮಾಡುತ್ತಿದ್ದೆವು. ನನ್ನ ತಂದೆಯ ಮರಣಾನಂತರ ನನ್ನ ತಾಯಿ ಕೆಲಸಕ್ಕಾಗಿ ಉಡುಪಿಗೆ ಹೋಗಿದ್ದು, ಅವರ ಜೊತೆ ನಮ್ಮನ್ನು ಸಹ ಕರೆದುಕೊಂಡು ಹೋಗಿ ಸಾಕಿ ಬೆಳೆಸಿ ದೊಡ್ಡವರನ್ನಾಗಿ ಮಾಡಿರುತ್ತಾರೆ. ನನ್ನನ್ನು ದಿನಾಂಕ 27-11-2003 ರಂದು 8ನೇ ಆರೋಪಿಯ ಮಗನಾದ ಆನಂದ ತಂದೆ ಮಹಾದೇವ ಕುಲ್ಲೊಳ್ಳಿ ಇವರೊಂದಿಗೆ ಮದುವೆ ಮಾಡಿರುತ್ತಾರೆ. ಸ್ವಲ್ಪ ದಿನಗಳವರೆಗೆ ನಾನು ಮತ್ತು ನನ್ನ ಗಂಡನ ಮನೆಯವರು ಚೆನ್ನಾಗಿದ್ದೆವು.

2. ನಾನು 3ನೇ ಮಗು ಹೆತ್ತ ನಂತರ ಆರೋಪಿತರ ಮನೆಯನ್ನು ಬಿಟ್ಟು, ನಾನು ಮತ್ತು ನನ್ನ ಗಂಡ ಜೊತೆಯಾಗಿ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ನನ್ನ ಗಂಡ ಗೌಂಡಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಒಂದು ಬೈಕ್ ಮತ್ತು ಓಮಿನಿ ವಾಹನ ಖರೀದಿಸಿದ್ದರು. ವಾಹನಗಳನ್ನು ಖರೀದಿಸಿದ ಸ್ವಲ್ಪ ದಿನಗಳ ನಂತರ ನನ್ನ ಗಂಡ ಒಂದು ಮನೆಯನ್ನು ಖರೀದಿಸಿರುತ್ತಾರೆ. ದಿನಾಂಕ 06-05-2021 ರಂದು ನನ್ನ ಗಂಡ ಕರೋನಾ ಕಾಯಿಲೆಯಿಂದ ಮರಣ ಹೊಂದಿರುತ್ತಾರೆ. ನನ್ನ ಗಂಡನ ಮರಣಾನಂತರ ನನ್ನ ತಾಯಿ ಉಡುಪಿಯಿಂದ ಬಂದು ನನ್ನ ಜೊತೆಗೆ ಇದ್ದರು. ನನ್ನ ತಾಯಿಗೆ ಪರಿಚಯವಿರುವ ಉಡುಪಿಯ ಮೆಹಬೂಬಸಾಬ ಎನ್ನುವವರು ನಮಗೆ ಮಾತನಾಡಿಸಲು ದಿನಾಂಕ 17-07-2021 ರಂದು ಸಂಜೆ 7 ಗಂಟೆಗೆ ಬಂದಿದ್ದರು. ನಾನು, ನನ್ನ ತಾಯಿ ಮೆಹಬೂಬಸಾಬ ಇವರೊಂದಿಗೆ ರಾತ್ರಿ ಸುಮಾರು 8-30 ಗಂಟೆವರೆಗೆ ಮಾತನಾಡುತ್ತಾ ಕುಳಿತ್ತಿದ್ದೆವು. ನಂತರ ಮೆಹಬೂಬಸಾಬರವರು ಮರಳಿ ಹೋಗುವುದಾಗಿ ಹೇಳಿದಾಗ, ಈಗ ರಾತ್ರಿ

ಆಗಿದೆ, ಬೆಳಿಗ್ಗೆ ಹೋಗಿ ಎಂದು ಹೇಳಿದೆವು. ಅದೇ ಸಮಯದಲ್ಲಿ ಆರೋಪಿತರೆಲ್ಲರೂ ನಮ್ಮ ಮನೆಗೆ ಬಂದು ಅಪರಿಚಿತ ವ್ಯಕ್ತಿಯನ್ನು ಮನೆಗೆ ಏಕೆ ಕರೆಸಿರುತ್ತೀರಿ ಎಂದು ಹೇಳಿ, ನನಗೆ, ನನ್ನ ತಾಯಿಗೆ ಮತ್ತು ಬಂದಿದ್ದ ಮೆಹಬೂಬಸಾಬ ಇವರಿಗೆ ಕೈಯಿಂದ ಹೊಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ಮತ್ತು ನನ್ನ ತಾಯಿಯ ಕೈಯಲ್ಲಿದ್ದ ಬಳೆಗಳು ಒಡೆದು ಹೋಗಿರುತ್ತವೆ. ನಂತರ ಆರೋಪಿತರೆಲ್ಲರೂ ಮೆಹಬೂಬಸಾಬ ಈತನನ್ನು ಎಳೆದುಕೊಂಡು ಹೋಗಿ ಕಂಬಕ್ಕೆ ಕಟ್ಟಿ ಹೊಡೆದಿರುತ್ತಾರೆ. ಆರೋಪಿತರೆಲ್ಲರೂ ನನಗೆ, ನನ್ನ ತಾಯಿಗೆ ಮತ್ತು ಮೆಹಬೂಬಸಾಬ ಇವರಿಗೆ ಕೆಟ್ಟ ಶಬ್ದಗಳಲ್ಲಿ ಬೈದಿರುತ್ತಾರೆ. ನಮ್ಮ ಮನೆಯ ಪಕ್ಕದಲ್ಲಿದ್ದ ಮಹಾದೇವ ಕಲ್ಮಠ, ಹೊಳೆಬಸು ಮತ್ತು ಇನ್ನು ಕೆಲವು ವ್ಯಕ್ತಿಗಳು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ಮತ್ತು ನನ್ನ ತಾಯಿ ಪೋಲಿಸ್ ಠಾಣೆಗೆ ಹೋಗಿ ಪೋಲಿಸರ ಮುಂದೆ ದೂರು ನೀಡಿರುತ್ತೇವೆ.

3. ಈಗ ಸಾಕ್ಷಿಗೆ ಸ.ಸ.ಅ ರವರು ಪ್ರಥಮ ವರ್ತಮಾನ ಹೇಳಿಕೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ಹೇಳಿಕೆಯನ್ನು ನೋಡಿ ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿರುವುದರಿಂದ, ಸದರಿ ಪ್ರಥಮ ವರ್ತಮಾನ ಹೇಳಿಕೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಘಟನೆಯಾದ ಮರುದಿನ ಪೋಲಿಸರು ನಮ್ಮ ಮನೆಗೆ ಬಂದಿದ್ದು, ನಾನು ತೋರಿಸಿರುವ ಸ್ಥಳದಲ್ಲಿ ಚಾಸಾ-2 ಮತ್ತು ಮಲ್ಲಪ್ಪ ಚಿಚಕಂಡಿರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಸ್ಥಳದಿಂದ ಒಂದು ಹಗ್ಗ ಮತ್ತು ಒಡೆದ ಗಾಜಿನ ಬಳೆಯ ಚೂರುಗಳನ್ನು ಜಪ್ತಿ ಮಾಡಿಕೊಂಡು ಹೋಗಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೋಲಿಸರು ಫೋಟೋಗಳನ್ನು ತೆಗೆದಿರುತ್ತಾರೆ. ಈಗ ಸಾಕ್ಷಿಯು ನಾಲ್ಕು ಫೋಟೋಗಳನ್ನು ನೋಡಿ ಅವುಗಳನ್ನು ಸ್ಥಳಪಂಚನಾಮೆ ಮಾಡುವ ಸಮಯದಲ್ಲಿ ತೆಗೆದಿರುವ ಫೋಟೋಗಳು ಎಂದು ಹೇಳಿದ್ದು, ಆದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ-5 ಎಂದು ಗುರುತಿಸಲಾಯಿತು. ಗಾಜಿನ ಕೈಬಳೆಯ ಚೂರುಗಳು ಇರುವ ಒಂದು ಪ್ಯಾಕೇಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ-1 ಎಂದು ಗುರುತಿಸಲಾಯಿತು. ಒಂದು ಹಗ್ಗದ ಕಟ್ಟನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ಎಂ.ಓ-2 ಎಂದು ಗುರುತಿಸಲಾಯಿತು. ನನಗೆ ಹೊಡೆಬಡೆ ಮಾಡಿದ ಆರೋಪಿತರು ಇಂದು ನ್ಯಾಯಲಾಯದ ಮುಂದೆ ಇದ್ದು, ಅವರನ್ನು ನಾನು ಗುರುತಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದಃ-</u>

1. 8ನೇ ಆರೋಪಿ ನನ್ನ ಅತ್ತೆ ಇರುತ್ತಾರೆ ಎಂದರೆ ಸರಿ. 2ನೇ ಆರೋಪಿ ನನ್ನ ಗಂಡನ ಸಹೋದರ ಇರುತ್ತಾನೆ ಎಂದರೆ ಸರಿ. 1ನೇ ಆರೋಪಿ ಗ್ರಾಮ ಪಂಚಾಯತ್ ಸದಸ್ಯರಾಗಿದ್ದು,

ಅವರು ಊರಿನಲ್ಲಿ ಹಿರಿತನ ಮಾಡುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿತರ ಮಧ್ಯ ಆಸ್ತಿ ವಿವಾದದ ಕುರಿತಾಗಿ ವೈಮನಸ್ಸು ಇತ್ತು ಎಂದರೆ ಸರಿ. ನಾನು ವಾಸವಾಗಿರುವ ಮನೆ ನನ್ನ ಅತ್ತೆ ಮತ್ತು ಮಾವ ಇವರಿಗೆ ಸೇರಿದ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ದುಡಿದು ಗಳಿಸಿದ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಹಾಗೂ 2 ಮತ್ತು 8ನೇ ಆರೋಪಿತರ ಮಧ್ಯ ಕುಟುಂಬದ ಆಸ್ತಿಗಳ ಕುರಿತು ಅಧಿಕೃತವಾಗಿ ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಎಫ್.ಡಿ. ಗಳನ್ನು ಇಡಲಾಗಿತ್ತು ಎಂದರೆ ಸರಿ. ಸದರಿ ಎಫ್.ಡಿ. ಗಳನ್ನು ಮಾಡಿಸುವಾಗ ನನ್ನ ಗಂಡ ಜೀವಂತ ಇದ್ದರು. ನನ್ನ ಗಂಡನ ಮರಣಾನಂತರ ಸದರಿ ಎಫ್.ಡಿ. ಹಣವನ್ನು ನಾನೊಬ್ಬಳೇ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ಸದರಿ ಎಫ್.ಡಿ. ಹಣದಲ್ಲಿ 2 ಮತ್ತು 8ನೇ ಆರೋಪಿತರು ತಮಗೂ ಸ್ವಲ್ಪ ಹಣ ಕೊಡು ಎಂದು ನನ್ನನ್ನು ಕೇಳಿದ್ದರು ಮತ್ತು ಈ ಕುರಿತು ಹಿರಿಯರ ಸಮಕ್ಷಮ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ನಮ್ಮ ಮನೆಗೆ ಬಂದಿದ್ದ ಮೆಹಬೂಬಸಾಬ ನನ್ನ ತಾಯಿಗೆ ಪರಿಚಯವಿರುವ ವ್ಯಕ್ತಿ ಇರುತ್ತಾರೆ. ಸದರಿ ಮೆಹಬೂಬಸಾಬ ಕುಷ್ಟಗಿ ತಾಲೂಕಿನ ಕಲಾಲಬಂಡಿ ಗ್ರಾಮದವನಾಗಿರುತ್ತಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆತನು ಕೆಲಸಕ್ಕಾಗಿ ಉಡುಪಿಯಲ್ಲಿ ವಾಸವಾಗಿದ್ದ ಎಂದು ಸ್ವತಃ ನುಡಿಯುತ್ತಾರೆ. ಸಾಮಾನ್ಯವಾಗಿ ತೀರಿಕೊಂಡವರ ಮನೆಯ ಜನರಿಗೆ ಮಾತನಾಡಿಸಲು ಬಂದ ವ್ಯಕ್ತಿಗಳು ಆ ಮನೆಯಲ್ಲಿ ವಾಸ ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ದಿನ ರಾತ್ರಿಯಾಗಿದ್ದರಿಂದ ಮೆಹಬೂಬಸಾಬ ರವರಿಗೆ ಉಳಿದುಕೊಳ್ಳಲು ಹೇಳಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ನನ್ನ ತಾಯಿ ಉಡುಪಿಯಿಂದ ಬಂದ ದಿನವೇ ಸದರಿ ಮೆಹಬೂಬಸಾಬ ನನ್ನ ತಾಯಿಯೊಂದಿಗೆ ನಮ್ಮ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ.

3. ನನ್ನ ಅತ್ತೆ ನನ್ನ ಜೊತೆಗೆ ಇರುತ್ತಿದ್ದರು ಎಂದರೆ ಸರಿಯಲ್ಲ. ನಾನು ಇರುವ ಮನೆಯ 3-4 ಮನೆಗಳ ನಂತರದಲ್ಲಿರುವ ಮನೆಯಲ್ಲಿ 2 ಮತ್ತು 8ನೇ ಆರೋಪಿತರು ವಾಸಿಸುತ್ತಿದ್ದರು. ಸದರಿ ಮೆಹಬೂಬಸಾಬ ಆ ದಿನ ನಮ್ಮ ಮನೆಗೆ ಸಂಜೆ 7 ಗಂಟೆಗೆ ಬಂದಿದ್ದರು. ಸಂಜೆ 7-30 ರಿಂದ 8 ಗಂಟೆ ಸಮಯದಲ್ಲಿ ಉಡುಪಿಗೆ ಹೋಗಲು ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಇವೆ ಎಂದರೆ ಸರಿಯಲ್ಲ. ನನ್ನ ಮಕ್ಕಳು 8ನೇ ಆರೋಪಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ. ಸದರಿ ಮೆಹಬೂಬಸಾಬ ನಮ್ಮ ಮನೆಗೆ ಬಂದಿರುವ ವಿಷಯವನ್ನು ನಾನು 2 ಮತ್ತು 8ನೇ

ಆರೋಪಿತರಿಗೆ ಹೇಳಿಲ್ಲ, ಆದರೆ ನನ್ನ ದೊಡ್ಡ ಮಗ ಅವರಿಗೆ ಹೇಳಿರುತ್ತಾನೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ.

4. ಆ ದಿನ ರಾತ್ರಿ 8-30 ಗಂಟೆಗೆ 2, 8ನೇ ಆರೋಪಿತರು ಹಾಗೂ ನನ್ನ ಗಂಡನ ಅಣ್ಣತಮ್ಮಂದಿರು ನಮ್ಮ ಮನೆಗೆ ಬಂದಿರುತ್ತಾರೆ. ಆ ದಿನ ನನ್ನ ಗಂಡನ ಅಣ್ಣತಮ್ಮಂದಿರು ನಮ್ಮ ಮನೆಗೆ ಬಂದಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ 8ನೇ ಆರೋಪಿಯು ಗಂಡಸರು ಇಲ್ಲದ ಮನೆಗೆ ಯಾರು ಬಂದಿದ್ದಾರೆ ಎಂದು ಕೇಳಲು ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು 8ನೇ ಆರೋಪಿಗೆ ಇದೆಲ್ಲಾ ಕೇಳಲು ನೀನು ಯಾರು ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಉಳಿದ ಆರೋಪಿತರು ನಿಮ್ಮ ಅತ್ತೆಗೆ ಏಕೆ ಬೈಯುತ್ತಿದ್ದೀಯಾ ಮತ್ತು ಬಂದಿರುವ ಅಪರಿಚಿತ ವ್ಯಕ್ತಿ ಯಾರು ಎಂದು ವಿಚಾರಿಸಲು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ಅಪರಿಚಿತ ವ್ಯಕ್ತಿಯನ್ನು ಗಂಡಸರು ಇಲ್ಲದ ಮನೆಯಲ್ಲಿ ಕರೆದುಕೊಳ್ಳಬೇಡಿ ಎಂದು ಬುದ್ಧಿವಾದ ಹೇಳಲು ಬಂದಿದ್ದರು ಎಂದರೆ ಸರಿಯಲ್ಲ. ಈ ಹಿಂದೆ ಸದರಿ ಆರೋಪಿತರು ಆಸ್ತಿ ವ್ಯಾಜ್ಯವನ್ನು ಬಗೆಹರಿಸಲು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ಆಸ್ತಿ ವ್ಯಾಜ್ಯವನ್ನು ಬಗೆಹರಿಸಲು ಬಂದಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8ನೇ ಆರೋಪಿಯು ಎಫ್.ಡಿ. ಹಣದಲ್ಲಿ ಮತ್ತು ವಾಹನಗಳಲ್ಲಿ ನಿಮಗೆ ಪಾಲು ಕೇಳಿದ್ದರು ಎಂದರೆ ಸಾಕ್ಷಿಯು ಹೌದು ಈ ಬಗ್ಗೆ ಜಗಳ ಮಾಡಿದ್ದರು ಎಂದು ನುಡಿಯುತ್ತಾರೆ.

5. ಆರೋಪಿತರು ನಮಗೆ ಬುದ್ಧಿವಾದ ಹೇಳಲು ಬಂದಾಗ ಸಮಯ ರಾತ್ರಿ 9 ಗಂಟೆಯಾಗಿತ್ತು ಎಂದರೆ ಸರಿ. ರಾತ್ರಿ 10-30 ಗಂಟೆಗೆ ದೂರನ್ನು ನನ್ನ ಮಗ ಬರೆದಿರುತ್ತಾನೆ ಮತ್ತು ಅದನ್ನು ಪೋಲಿಸರಿಗೆ ನಾನು ನೀಡಿರುತ್ತೇನೆ. ದೂರನ್ನು ಬರೆಯಲು ಪೋಲಿಸರು ನಮಗೆ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಂಡಸರು ಇಲ್ಲದ ಮನೆಗೆ ಸದರಿ ಮೆಹಬೂಬಸಾಬ ಬಂದಿರುವುದರಿಂದ, ಆರೋಪಿತರು ಈ ಬಗ್ಗೆ ನನ್ನನ್ನು ವಿಚಾರಿಸಿದ್ದು, ಇದರ ವಿರುದ್ಧವಾಗಿ ನಾನು ಎಲ್ಲಾ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 8ನೇ ಆರೋಪಿತರು ಆಸ್ತಿಯಲ್ಲಿ ಪಾಲು ಕೇಳದಂತೆ ಅವರಿಗೆ ಭಯಪಡಿಸಲು ನಾನು ಸದರಿ ಆರೋಪಿತರ ವಿರುದ್ಧ ಮತ್ತು ಇತರ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಮತ್ತು ನನ್ನ ತಾಯಿಯನ್ನು ಹೊಡೆಬಡೆ ಮಾಡಿರುತ್ತಾರೆ ಎಂದು ನಾನು ಪೋಲಿಸರ ಮುಂದೆ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಂ.ಓ-1 ಮತ್ತು 2 ನ್ನು

ನಾನೇ ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಬಂದು ಅವುಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ನಾನೇ ಬಳೆಯ ಚೂರುಗಳನ್ನು ಒಡೆದು ಮತ್ತು ಮನೆಯಲ್ಲಿರುವ ಒಂದು ಹಗ್ಗವನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2025.08.13 10:42:42 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ.ನಂ.**34/2022** | |
| | ಚಾಸಾ-**3** |
| | ಪ್ರಾಸಾ-**2** |
| ಸಾಕ್ಷಿದಾರರ ಹೆಸರು | ಶಕುಂತಲಾ ತೇಲಿ |
| ಗಂಡನ ಹೆಸರು | ಬಸಪ್ಪ |
| ವಯಸ್ಸು | **50** ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಉಡುಪಿ |

ದಿನಾಂಕ **12-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ.ಅ ರವರಿಂದ:-

1. ಚಾಸಾ-1 ನನ್ನ ಮಗಳು ಇರುತ್ತಾಳೆ. ನನಗೆ ಚಾಸಾ-4 ರಿಂದ 8 ರವರ ಪರಿಚಯವಿದೆ. ನನಗೆ ನ್ಯಾಯಾಲಯದ ಮುಂದಿರುವ ಎಲ್ಲಾ ಆರೋಪಿತರ ಪರಿಚಯವಿದೆ. ನನ್ನ ಮಕ್ಕಳು ಚಿಕ್ಕವಯಸ್ಸಿನಲ್ಲಿರುವಾಗ ನನ್ನ ಗಂಡ ತೀರಿಕೊಂಡಿರುತ್ತಾರೆ. ನಂತರ ನಾನು ಕೂಲಿ ಕೆಲಸಕ್ಕಾಗಿ ಉಡುಪಿಗೆ ಹೋಗಿರುತ್ತೇನೆ. ನಂತರ ನನ್ನ ಮಗಳಾದ ಚಾಸಾ-1 ರವರನ್ನು 8ನೇ ಆರೋಪಿಯ ಮಗನಾದ ಆನಂದ ಇವರೊಂದಿಗೆ ಮದುವೆ ಮಾಡಿರುತ್ತೇನೆ. ಸದರಿಯವರಿಗೆ ಮೂರು ಜನ ಮಕ್ಕಳು ಜನಿಸಿರುತ್ತಾರೆ. ಚಾಸಾ-1 ರವರಿಗೆ 3ನೇ ಮಗು ಜನಿಸಿದ ನಂತರ ಚಾಸಾ-1 ಮತ್ತು ಆಕೆಯ ಗಂಡ 8ನೇ ಆರೋಪಿಯ ಮನೆಯನ್ನು ಬಿಟ್ಟು ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದರು. ಚಾಸಾ-1 ರವರ ಗಂಡ ಒಂದು ಬೈಕ್ ಮತ್ತು ಒಂದು ಓಮಿನಿ ಗಾಡಿ ಖರೀದಿಸಿದ್ದ. ಚಾಸಾ-1 ರವರ ಗಂಡ ತಾನು ಗಳಿಸಿದ ಹಣವನ್ನು ಬ್ಯಾಂಕಿನಲ್ಲಿ ಎಫ್.ಡಿ ಮಾಡಿ ಇಟ್ಟಿದ್ದ.

2. ಸುಮಾರು 5 ವರ್ಷಗಳ ಹಿಂದೆ ಚಾಸಾ-1 ರವರ ಗಂಡ ಕರೋನಾ ಕಾಯಿಲೆಯಿಂದ ಮರಣ ಹೊಂದಿರುತ್ತಾನೆ. ಆತ ಮರಣ ಹೊಂದಿದ ವಿಷಯವನ್ನು ಚಾಸಾ-1 ರವರ ಮೈದುನ ನನಗೆ ತಿಳಿಸಿರುತ್ತಾನೆ. ನಂತರ ನಾನು ಚಾಸಾ-1 ರವರ ಮನೆಗೆ ಬಂದು ಅಲ್ಲಿಯೇ ವಾಸವಿದ್ದೆ. ಸುಮಾರು 4-5 ದಿವಸಗಳ ನಂತರ ನನಗೆ ಪರಿಚಯವಿದ್ದ ಮೆಹಬೂಬಸಾಬ ಎನ್ನುವವರು ನನ್ನನ್ನು ಭೇಟಿಯಾಗಲು ಸಂಜೆ 7 ಗಂಟೆಗೆ ಬಂದಿದ್ದರು. ನಾವೆಲ್ಲರೂ ಮಾತುಕತೆ ಮಾಡುವಷ್ಟರಲ್ಲಿ ರಾತ್ರಿ 10 ಗಂಟೆಯಾಗಿತ್ತು. ಆಗ ಅವರು ಮರಳಿ ತಮ್ಮ ಊರಿಗೆ ಹೋಗವುದಾಗಿ ಹೇಳಿದರು. ಆಗ ನಾನು ವಾಪಸ್ ಹೋಗಲು ಬಸ್ಸು ಇರುವುದಿಲ್ಲ, ಇಲ್ಲಿಯೇ ಇದ್ದು ಬೆಳಿಗ್ಗೆ ಹೋಗಿ ಎಂದು ಹೇಳಿದೆ. ಅಷ್ಟರಲ್ಲಿಯೇ ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಮನೆಗೆ ಬಂದು, ಗಂಡಸರು ಇಲ್ಲದ ಮನೆಯಲ್ಲಿ ಬೇರೆ ಗಂಡಸನ್ನು ಯಾಕೆ ಕೂರಿಸಿಕೊಂಡಿದ್ದೀರಿ ಎಂದು ಹೇಳಿ, ನಮಗೆ ಹೊಲಸು ಶಬ್ದಗಳಿಂದ ಬೈದಿರುತ್ತಾರೆ. ಅವರು ನಮಗೆ ಹೊಡೆಬಡೆ ಮಾಡಿರುತ್ತಾರೆ. 1ನೇ

ಆರೋಪಿಯು ನನ್ನ ಹಾಗೂ ಚಾಸಾ-1 ರವರ ಮೈಮೇಲಿನ ಸೀರೆಯನ್ನು ಹಿಡಿದು ಎಳೆದಾಡಿರುತ್ತಾರೆ. ನನ್ನ ಕೈಯಲ್ಲಿದ್ದ ಬಳೆಗಳನ್ನು ಒಡೆದಿರುತ್ತಾರೆ. ನಮ್ಮ ಮನೆಗೆ ಬಂದಿದ್ದ ಮೆಹಬೂಬಸಾಬ ಇವರನ್ನು ಆರೋಪಿತರು ಹೊಡೆಬಡೆ ಮಾಡಿ, ಹೊರಗೆ ಎಳೆದು ತಂದು ಕಂಬಕ್ಕೆ ಕಟ್ಟಿ ಹೊಡೆಬಡೆ ಮಾಡಿರುತ್ತಾರೆ. ಅದೇ ರೀತಿಯಾಗಿ ಎಲ್ಲಾ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ. ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ಮತ್ತು ಚಾಸಾ-1 ರವರು ಪೋಲಿಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇವೆ. ಈಗ ಸಾಕ್ಷಿಯು ಎಂ.ಓ-1 ಗಾಜಿನ ಬಳೆ ಚೂರುಗಳು ಮತ್ತು ಎಂ.ಓ-2 ಹಗ್ಗ ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು ನಮಗೆ ಹೊಡೆಬಡೆ ಮಾಡಿರುತ್ತಾರೆ.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:-

ಈಗ ನ್ಯಾಯಾಲಯದ ಸಮಯ 2 ಗಂಟೆಯಾಗಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2025.08.13 10:42:54 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ದಿನಾಂಕ **12-08-2025** ರಂದು ಮಧ್ಯಾಹ್ನ ಪಿ.ಡಬ್ಲ್ಯು-**2** ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದ:-

1. 8ನೇ ಆರೋಪಿ ನನ್ನ ಗಂಡನ ಖಾಸಾ ಅಕ್ಕ ಇರುತ್ತಾರೆ ಎಂದರೆ ಸರಿ. ಆಸ್ತಿಯ ಕುರಿತಾಗಿ ಚಾಸಾ-1 ಹಾಗೂ 2 ಮತ್ತು 8ನೇ ಆರೋಪಿತರ ಮಧ್ಯ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. 8ನೇ ಆರೋಪಿಯು ನನ್ನ ಅಳಿಯನ ಎಫ್.ಡಿ. ಹಣವನ್ನು ಚಾಸಾ-1 ರವರಿಗೆ ಕೇಳಿರುತ್ತಾರೆ ಎಂದರೆ ಸರಿ. ನನ್ನ ಅಳಿಯ ತನ್ನ ಜೀವಿತಾವಧಿಯಲ್ಲಿ 8ನೇ ಆರೋಪಿಗೆ ಆಕೆಯ ಜೀವನಾಂಶಕ್ಕಾಗಿ ಹಣ

ಕೊಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಗಂಡ, 2 ಮತ್ತು 8ನೇ ಆರೋಪಿತರು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. ನಾನು ಉಡುಪಿಯಿಂದ ಜಮಖಂಡಿಗೆ ಯಾವ ದಿನಾಂಕದಂದು ಬಂದಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ನಾನು ಉಡುಪಿಯಿಂದ ಜಮಖಂಡಿಗೆ ಮಧ್ಯಾಹ್ನ ಬಂದಿರುತ್ತೇನೆ. ನನಗೆ ಮಾಬೂಸಾಬ ಎನ್ನುವವರು 2-3 ವರ್ಷಗಳಿಂದ ಪರಿಚಯವಿರುತ್ತಾರೆ. ಉಡುಪಿಯಿಂದ ನಾನು ಮತ್ತು ಮಾಬೂಸಾಬ ಇಬ್ಬರೂ ಕೂಡಿ ಬಂದಿದ್ದೆವು ಎಂದರೆ ಸರಿಯಲ್ಲ. ಸದರಿ ಮಾಬೂಸಾಬ ಇವರು ಸಂಜೆ 7 ಗಂಟೆಗೆ ಜಮಖಂಡಿಯಲ್ಲಿರುವ ನಮ್ಮ ಮನೆಗೆ ಬಂದಿದ್ದರು. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ತೀರಿಕೊಂಡವರ ಮನೆಗೆ ಮಾತನಾಡಿಸಲು ಹೋದವರು ಅವರ ಮನೆಯಲ್ಲಿ ವಸತಿ ಮಾಡುವುದಿಲ್ಲ ಎಂದರೆ ಸರಿ. ಘಟನೆಯಾದ ದಿನ ನಾನು, ಚಾಸಾ-1, ನನ್ನ ಮೊಮ್ಮಕ್ಕಳು ಮತ್ತು ಮಾತನಾಡಿಸಲು ಬಂದಂತಹ ವ್ಯಕ್ತಿ ನಮ್ಮ ಮನೆಯಲ್ಲಿ ಇದ್ದೆವು. ಸದರಿ ಮಾಬೂಸಾಬ ಇವರು ಕುಷ್ಟಗಿ ತಾಲೂಕಿನ ಕಲಾಲಬಂಡಿ ಗ್ರಾಮದವರು ಎಂದರೆ ಸರಿ.

3. ಸದರಿ ಮಾಬೂಸಾಬ ಇವರು ಉಡುಪಿಯಲ್ಲಿ ಇರುವುದಿಲ್ಲ, ಕಲಾಲಬಂಡಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ 8ನೇ ಆರೋಪಿಯು ಗಂಡಸರು ಇಲ್ಲದ ಮನೆಯಲ್ಲಿ ಯಾರು ಬಂದಿದ್ದಾರೆ ಎಂದು ವಿಚಾರಿಸಲು ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು 8ನೇ ಆರೋಪಿಗೆ ಬೈದು, ನಿಂದಿಸಿ ಅವರನ್ನು ನಮ್ಮ ಮನೆಯಿಂದ ಹೊರಕಳಿಸಿರುತ್ತೇವೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಗ್ರಾಮ ಪಂಚಾಯತ್ ಅಧ್ಯಕ್ಷನಾಗಿದ್ದು, ಆತ ಊರಿನಲ್ಲಿ ಹಿರಿತನ ಮಾಡುತ್ತಿದ್ದ ಎಂದರೆ ಸರಿ. ಸದರಿ ಆರೋಪಿ ನಮ್ಮ ಸಮಾಜದ ಮುಖಂಡನಾಗಿರುವುದರಿಂದ ಹಿರಿತನ ಮಾಡುತ್ತಿದ್ದ ಎಂದರೆ ಸರಿಯಲ್ಲ. 2 ಮತ್ತು 8ನೇ ಆರೋಪಿತರು ಮೃತ ನನ್ನ ಅಳಿಯನ ಆಸ್ತಿಯಲ್ಲಿ ಪಾಲು ಕೇಳಿರುವುದರಿಂದ, ಅವರ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರಿತನ ಮಾಡಲು ಬಂದ 1, 3 ರಿಂದ 7 ಮತ್ತು 9ನೇ ಆರೋಪಿತರ ವಿರುದ್ಧ ಸುಳ್ಳು ಆರೋಪ ಮಾಡಿ ಈ ಪ್ರಕರಣದಲ್ಲಿ ನಾನು ಮತ್ತು ಚಾಸಾ-1 ರವರು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

4. ದೂರು ನೀಡಲು ನಾನು ಮತ್ತು ಚಾಸಾ-1ರವರು ರಾತ್ರಿ ಪೋಲಿಸ್ ಠಾಣೆಗೆ ಹೋಗಿದ್ದೆವು, ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ದೂರನ್ನು ಪೋಲಿಸರು ಬರೆದಿರುತ್ತಾರೆ. ಎಂ.ಓ-1 ಬಳೆ ಚೂರುಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಸಿಗುತ್ತವೆ

ಎಂದರೆ ಸರಿ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ಘಟನೆಯಾದ ದಿನ ರಾತ್ರಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. 2 ಮತ್ತು 8ನೇ ಆರೋಪಿತರು ಮೃತ ನನ್ನ ಅಳಿಯನ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದಾರೆ ಎಂಬ ಕಾರಣಕ್ಕಾಗಿ, ನಾನು ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2025.08.13 10:43:02 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.